## ಕಾರ್ಮಿಕ ನ್ಯಾಯಾಲಯ, ಮೈಸೂರು.

**Ref**: 07/2024

ಡಬ್ಲ್ಯೂ ಡಬ್ಲ್ಯೂ-1

**ದಿನಾಂಕ 23.07.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು**

**ಮುಂದುವರೆದ ಪಾಟೀ ಸವಾಲುಃ 2 ನೇ ಪಕ್ಷಗಾರರ ಪರ ಶ್ರೀ ಜೆ.ಪಿ. ವಕೀಲರಿಂದಃ**

ನಾನು ಈ ಪ್ರಕರಣದಲ್ಲಿ Official Liquidator ಆದ ರವಿಶಂಕರ ದೇವರಕೊಂಡ ಹಾಗೂ 2 ನೇ ಪಕ್ಷಗಾರ ಸಂಖ್ಯೆ 2 ರವರನ್ನು ಪಕ್ಷಗಾರರನ್ನಾಗಿ ಮಾಡಿದ್ದೆ ಎಂದರೆ ಸರಿ. ದಿನಾಂಕ 11.11.2020 ರಂದು Official Liquidator ರವರು ಒಂದು ತೀರ್ಮಾನ ಮಾಡಿದ ನಂತರ 2 ನೇ ಪಕ್ಷಗಾರ ಸಂಖ್ಯೆ 2 ರವರು ನನ್ನನ್ನು ಕೆಲಸಕ್ಕೆ ತೆಗೆದುಕೊಂಡಿರುವುದಿಲ್ಲ ಎಂದರೆ ಸರಿ. ನನ್ನನ್ನು ಕೆಲಸದಿಂದ ತೆಗೆದಿರುವುದು Official Liquidator ಆದ ರವಿಶಂಕರ ದೇವರಕೊಂಡ ರವರು ಎಂದರೆ ಸರಿ. 2 ನೇ ಪಕ್ಷಗಾರ ಸಂಖ್ಯೆ 2 ರವರು ನನ್ನನ್ನು ಯಾವತ್ತೂ ಕೆಲಸಕ್ಕೆ ತೆಗೆದು ಕೊಂಡಿಲ್ಲ ಆದ್ದರಿಂದ ನನ್ನನ್ನು ವಜಾ ಮಾಡಿಲ್ಲ ಎಂದರೆ ಸರಿ. ಆದ್ದರಿಂದ 2 ನೇ ಪಕ್ಷಗಾರ ಸಂಖ್ಯೆ 2 ರವರು ನನ್ನನ್ನು ಪುನರ್ ನೇಮಕ ಮಾಡಿಕೊಳ್ಳುವ ಪ್ರಶ್ನೆ ಬರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮತ್ತು 2 ನೇ ಪಕ್ಷಗಾರ ಸಂಖ್ಯೆ 2 ರವರ ನಡುವೆ ಮಾಲೀಕ ಹಾಗೂ ಕಾರ್ಮಿಕರ ಸಂಬಂಧ ಯಾವತ್ತೂ ಇರಲಿಲ್ಲ ಎಂದರೆ ಸರಿ. 2 ನೇ ಪಕ್ಷಗಾರ ಸಂಖ್ಯೆ 2 ರವರು ನನಗೆ ಯಾವತ್ತೂ ವೇತನ ಪಾವತಿ ಮಾಡಿಲ್ಲ ಎಂದರೆ ಸರಿ. ನನಗೆ ವೇತನವನ್ನು ರವಿಶಂಕರ ದೇವರಕೊಂಡರವರು ಕೊಡುತ್ತಿದ್ದರು. ಆದ್ದರಿಂದ 2 ನೇ ಪಕ್ಷಗಾರ ಸಂಖ್ಯೆ 2 ರವರ ವಿರುದ್ದ ನಾನು ಹಾಕಿರುವ ಅರ್ಜಿ ಊರ್ಜಿತವಾಗುವುದಿಲ್ಲ, ನಾನು ಯಾವುದೇ ಪರಿಹಾರಕ್ಕೂ ಅರ್ಹನಲ್ಲ ಎಂದರೆ ಸರಿಯಲ್ಲ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಿದೆ.)
(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ, ತಿಳಿಸಿ, ಹೇಳಿದಾಗ, ಅವರು ಅದು ಸರಿ ಇದೆ ಎಂದು ಒಪ್ಪಿದ್ದಾರೆ.)

**ಅಧ್ಯಕ್ಷಾಧಿಕಾರಿಗಳು,**
**ಕಾರ್ಮಿಕ ನ್ಯಾಯಾಲಯ, ಮೈಸೂರು**